Date : 21-9-2015

# ಭಾರತದ ಗೋಡಂಬಿ ತಿರುಳು ವಿದೇಶಿ ವಿನಿಮಯ ಇಳಿಕೆ

ಭಾರತ 2014–15ರ ಸಾಲಿನಲ್ಲಿ ರೂ.6571 ಕೋಟಿ ಬೆಲೆಯ ಕಚ್ಚಾ ಗೇರುಬೀಜ ಆಮದು ಮಾಡಿದ್ದು ಇದೇ ಸಮಯದ ಗೋಡಂಬಿ ತಿರುಳು ರಫ್ತು ರೂ.5433 ಕೋಟಿ ರೂ. ಗಳಷ್ಟಾಗಿದ್ದು ವಿದೇಶಿ ವಿನಿಮಯ ರೂ.1138 ಕೋಟಿ ಕಡಿಮೆಯಾಗಿದೆ. ಈ ವರ್ಷದ ಪ್ರಥಮ 8 ತಿಂಗಳುಗಳ ಕಚ್ಚಾ ಗೇರುಬೀಜ ಆಮದು ರೂ.6000 ಕೋಟಿಗಳಷ್ಟಾಗಿದ್ದು, ರಫ್ತು ರೂ.2068 ಕೋಟಿಗಳಷ್ಟಾಗಿದೆ. ವಿದೇಶಿ ವಿನಿಮಯ ರೂ.3932 ಕೋಟಿಗಳಷ್ಟು ಕಡಿಮೆಯಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಗಳ ದರ ಕಡಿಮೆ ಇರುವುದು, ಆಂತರಿಕ ಮಾರುಕಟ್ಟೆಯ ಬೇಡಿಕೆ ಹೆಚ್ಚಳವಿರುವುದು ಮತ್ತು ಗೋಡಂಬಿ ತಿರುಳು ರಫ್ತಿಗೆ ಪ್ರೋತ್ಸಾಹ ಧನ ಕಡಿತ ಪ್ರಸ್ತುತ ಸ್ಥಿತಿಗೆ ಕಾರಣವೆಂದು ಗೋಡಂಬಿ ಕಾರ್ಖಾನೆಗಳವರ ಅನಿಸಿಕೆಯಾಗಿದೆ. ಕಚ್ಚಾ ಗೋಡಂಬಿ ಸುಂಕ ರಹಿತವಾಗಿ ಆಮದು ಮಾಡಲು ಕೆಲವು ಶರ್ತಗಳಿಗೊಳಪಟ್ಟು ಆವಕಾಶವಿದೆ.

ಸರಕಾರ ಈ ಹಿಂದೆ ಕೆಲವು ಶರ್ತಗಳಿಗೊಳಪಟ್ಟು ಆಮದು ತೆರಿಗೆ ರಹಿತ ಕಚ್ಚಾ ಗೇರು ಬೀಜ ಆಮದಿಗೆ ಅವಕಾಶ ನೀಡಿದೆ. 33 ಶೇಕಡಾ ಮೌಲ್ಯ ವರ್ಧಿತಗೊಳಿಸಿ 180 ದಿನಗಳೊಳಗೆ ರಫ್ತು ಮಾಡುವುದು ಪ್ರಮುಖ ಶರ್ತವಾಗಿತ್ತು. ಪಾವತಿಸಮತೋಲನವನ್ನು ವಿದೇಶಿ ವಿನಿಮಯದ ಮೂಲಕ ಕಾಪಾಡುವುದು ಇದರ ಪ್ರಮುಖ ಉದ್ದೇಶ ಆದರೆ ಈಗ ಉತ್ತಮ ದರ್ಜೆಯ ಕಚ್ಚಾ ಗೇರು ಬೀಜ ಆಮದು ಮಾಡಿ ಇತರ ಕಾರ್ಖಾನೆಗಳಿಗೆ ಪೂರೈಕೆಯಾಗುತ್ತಿದೆ. ಇದರಿಂದುತ್ಪಾದಿತವಾದ ಗೋಡಂಬಿ ತಿರುಳು ರಫ್ತಾಗುವ ಬಳಕೆದಾರ ಶರ್ತ ಪೂರೈಕೆಯ ವಿಷಯವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಬಳಕೆದಾರ ಶರ್ತದ ಪ್ರಕಾರ ಈಗ 2.25 ಲಕ್ಷ ಟನ್‌ಗಳಷ್ಟು ಗೋಡಂಬಿ ತಿರುಳು ರಫ್ತಾಗಬೇಕಿತ್ತು. ಆದರೆ ಈಗ 1.19 ಲಕ್ಷ ಟನ್‌ಗಳಷ್ಟು ಗೋಡಂಬಿ ತಿರುಳು ಮಾತ್ರ ರಫ್ತಾಗಿದೆ.